# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 235**
**ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್,**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 06.03.2025.**
**ಉತ್ತರಿಸುವ ಸಚಿವರು : ಗೃಹ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಂಡಿತ ಮತ್ತು ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟು; | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಬಂದಿಗಳ ಸಂಖ್ಯೆ 3915 ಮತ್ತು ಶಿಕ್ಷಾ ಬಂದಿಗಳ ಸಂಖ್ಯೆ (ದಂಡಿತ) 1112 ಒಟ್ಟು 5027 ಬಂದಿಗಳು ದಾಖಲಾಗಿರುತ್ತಾರೆ. (ದಿನಾಂಕ: 01.03.2025ಕ್ಕೆ ಅಂತ್ಯಗೊಂಡಂತೆ). |
| ಆ | ಇಲ್ಲಿರುವ ಖೈದಿಗಳು ತಮ್ಮ ಸಂಬಂಧಿಕರು ಅಥವಾ ಸ್ನೇಹಿತರಿಂದ ಹೊರಗಿನ ಆಹಾರವನ್ನು ಪಡೆಯಲು ಅವಕಾಶವಿದೆಯೇ; | ➢ ಕಾರಾಗೃಹದ ಬಂದಿಗಳಿಗೆ ಅವರ ಸಂಬಂಧಿಕರು ಅಥವಾ ಸ್ನೇಹಿತರಿಂದ ಹೊರಗಿನ ಆಹಾರವನ್ನು ಪಡೆಯಲು ಅವಕಾಶ ನೀಡಿರುವುದಿಲ್ಲ.<br>➢ ಗೌ॥ ನ್ಯಾಯಾಲಯಗಳು ಕಾರಾಗೃಹದ ಬಂದಿಗಳಿಗೆ ಅವರ ಮನೆ ಊಟ ತರಿಸಿಕೊಳ್ಳಲು ಆದೇಶಿಸಿದ್ದಲ್ಲಿ ಅದರಂತೆ ಕ್ರಮ ವಹಿಸಲಾಗುತ್ತಿದೆ. |
| ಇ | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಆಹಾರ ತಪಾಸಣೆ ಪ್ರಯೋಗಾಲಯದ ಸೌಲಭ್ಯವಿದೆಯೇ; ಹೊರಗಿನ ಆಹಾರವನ್ನು ಪಡೆಯಲು ಅನುಮತಿ ಇದ್ದರೆ ಅದನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗುತ್ತಿದೆಯೇ; | ➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಆಹಾರ ತಪಾಸಣೆ ಪ್ರಯೋಗಾಲಯದ ಸೌಲಭ್ಯವಿರುವುದಿಲ್ಲ.<br>➢ ಪ್ರತಿ ದಿನ ಕಾರಾಗೃಹದಲ್ಲಿ ತಯಾರಿಸಲ್ಪಟ್ಟ ಆಹಾರ ಪದಾರ್ಥಗಳನ್ನು ಮುಖ್ಯ ಅಧೀಕ್ಷಕರು/ಅಧೀಕ್ಷಕರು ಮತ್ತು ಮುಖ್ಯ ವೈದ್ಯಾಧಿಕಾರಿಗಳು / ವೈದ್ಯಾಧಿಕಾರಿಗಳು ಪರಿಶೀಲಿಸಿದ ನಂತರವೇ ಬಂದಿಗಳಿಗೆ ವಿತರಿಸಲಾಗುತ್ತದೆ. |
| ಈ | ದೀರ್ಘಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ದಂಡಿತ ಖೈದಿಗಳ ಸಂಖ್ಯೆ ಎಷ್ಟು; ಅವರನ್ನು ರಾಜ್ಯದ ವಿಭಿನ್ನ ಸ್ಥಳಗಳಿಗೆ ಸ್ಥಳಾಂತರಿಸಲು ನಿಯಮಗಳ ಬಗ್ಗೆ ಮಾಹಿತಿ ನೀಡುವುದು; | ➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ದಿನಾಂಕ: 01.03.2025ಕ್ಕೆ ಅಂತ್ಯಗೊಂಡಂತೆ 10 ವರ್ಷಕ್ಕೂ ಮೇಲ್ಪಟ್ಟು ಶಿಕ್ಷೆ ಅನುಭವಿಸುತ್ತಿರುವ ಒಟ್ಟು 644 ಜನ ಶಿಕ್ಷಾ ಬಂದಿಗಳು ದಾಖಲಿರುತ್ತಾರೆ.<br>➢ ರಾಜ್ಯದ ವಿವಿಧ ಕಾರಾಗೃಹಗಳಿಗೆ ಸ್ಥಳಾಂತರಿಸಲು ಕರ್ನಾಟಕ ಕಾರಾಗೃಹ ಮತ್ತು ಸುಧಾರಣಾ ಸೇವೆ ಕೈಪಿಡಿ 2021ರ ಕಂಡಿಕೆ-539 ರಂತೆ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಉ | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಖೈದಿಗಳಿಗೆ ಅನಧಿಕೃತವಾಗಿ ಮೊಬೈಲ್ ಬಳಸುವ ವ್ಯವಸ್ಥೆ, ಗಾಂಜಾ, ಮದ್ಯ-ಮಾದಕ ವಸ್ತುಗಳು ಮುಕ್ತವಾಗಿ ಲಭ್ಯವಿರುವುದೇ; ಇಲ್ಲದಿದ್ದಲ್ಲಿ ಅವು ಕಾರಾಗೃಹದ ಆವರಣಕ್ಕೆ ಪ್ರವೇಶಿಸದಿರಲು ಕೈಗೊಂಡಿರುವ ಕ್ರಮಗಳೇನು? | ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ಅನಧಿಕೃತವಾಗಿ ಮೊಬೈಲ್ ಬಳಸುವ ವ್ಯವಸ್ಥೆ, ಗಾಂಜಾ ಮತ್ತು ಮದ್ಯ-ಮಾದಕ ವಸ್ತುಗಳಿಗೆ ಅವಕಾಶವಿರುವುದಿಲ್ಲ.<br><br>**ಕಾರಾಗೃಹದ ಆವರಣಕ್ಕೆ ಯಾವುದೇ ನಿಷೇಧಿತ ವಸ್ತುಗಳು ಪ್ರವೇಶಿಸದಿರಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.**<br><br>➢ ಕೆ.ಎಸ್.ಐ.ಎಸ್.ಎಫ್. ಸಿಬ್ಬಂದಿಗಳನ್ನು ಕಾರಾಗೃಹದ ಮುಖ್ಯದ್ವಾರದಲ್ಲಿ ಹಾಗೂ ಹೊರ ವೃತ್ತದ ವಿಭಾಗಗಳಲ್ಲಿ ಭದ್ರತೆ, ತಪಾಸಣೆ ಹಾಗೂ ಗಸ್ತು ನಿರ್ವಹಣೆ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. |
| | | ➢ ಮುಖ್ಯದ್ವಾರದ ಒಳಭಾಗದಲ್ಲಿ ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಯವರಿಂದ ದಿನದ 24x7 ಘಂಟೆಗಳ ಕಾಲ ಕಾರಾಗೃಹಕ್ಕೆ ಆಗಮಿಸುವ ಮತ್ತು ನಿರ್ಗಮಿಸುವ ಎಲ್ಲಾ ವ್ಯಕ್ತಿಗಳನ್ನು ಭದ್ರತಾ ಉಪಕರಣಗಳನ್ನು ಬಳಸಿಕೊಂಡು ತಪಾಸಣೆ ಮಾಡಲಾಗುತ್ತದೆ ಹಾಗೂ ಸಂಸ್ಥೆಗೆ ಬರುವ ಎಲ್ಲಾ ಸಾಮಗ್ರಿಗಳನ್ನು ಬ್ಯಾಗೇಜ್ ಸ್ಕ್ಯಾನರ್ ಮೂಲಕ ಹಾಗೂ ಸಿಬ್ಬಂದಿಗಳಿಂದ ಭೌತಿಕವಾಗಿ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ.<br><br>➢ ಕಾರಾಗೃಹಕ್ಕೆ ಪ್ರವೇಶಿಸುವ ಎಲ್ಲಾ ವಾಹನಗಳನ್ನು ಮುಖ್ಯ ದ್ವಾರದಲ್ಲಿ ನಿಲ್ಲಿಸಿ, ಎಲ್ಲಾ ಆಹಾರ ಮತ್ತು ಇನ್ನಿತರೆ ವಸ್ತುಗಳನ್ನು ಸ್ಕ್ಯಾನ್ ಮಾಡಿದ ನಂತರ ಒಳಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ.<br><br>➢ ಭದ್ರತಾ ಉಪಕರಣಗಳಾದ Non Linear Junction Detector, Deep Search Metal Detector, HHMD, MESA, FG-1 Security Pole, DFMD, Body Worn Cameras, Drones ಮತ್ತು Walkie-Talkie ಗಳನ್ನು ಬಳಸಿ ತಪಾಸಣೆ ಕೈಗೊಳ್ಳಲಾಗುತ್ತಿದೆ.<br><br>➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಅಳವಡಿಸಿರುವ 280 ಸಂಖ್ಯೆ ಸಿಸಿಟಿವಿ ಕ್ಯಾಮರಾಗಳಿಗೆ ಅತ್ಯಾಧುನಿಕ AI-Powered Audio-Video Analytics System ಕಣ್ಗಾವಲು ವ್ಯವಸ್ಥೆಯನ್ನು 2025ನೇ ಫೆಬ್ರವರಿ ಮಾಹೆಯಲ್ಲಿ ಅಳವಡಿಸಲಾಗಿದೆ. |

| | | |
|---|---|---|
| | | ➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಫೋನ್ ಬಳಸುವುದನ್ನು ತಡೆಯುವ ಸಲುವಾಗಿ 03 ಸಂಖ್ಯೆ T-HCBS ಸ್ಥಾವರಗಳನ್ನು ಅಳವಡಿಸಲಾಗಿರುತ್ತದೆ.<br><br>➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಈ ಹಿಂದೆ ಅಳವಡಿಸಲಾಗಿರುವ 19 ಸಂಖ್ಯೆ ಮೊಬೈಲ್ ಜಾಮರ್ ಗಳ ದುರಸ್ತಿ ಮತ್ತು 2G ಇಂದ 5G ಗೆ ಮೇಲ್ದರ್ಜೆಗೇರಿಸುವ ಕಾರ್ಯ ಅಂತಿಮ ಹಂತದಲ್ಲಿದ್ದು, Testing and Recalibration ಹಂತದಲ್ಲಿರುತ್ತದೆ. ಕಾರಾಗೃಹದ ಒಳಭಾಗದಲ್ಲಿ ಯಾವುದೇ ನೆಟ್‌ವರ್ಕ್ ದೊರೆಯದಂತೆ ಕ್ರಮವಹಿಸಲಾಗಿರುತ್ತದೆ.<br><br>➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಈಗಾಗಲೇ 02 ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್‌ಗಳ ಮೂಲಕ ತಪಾಸಣೆ ಕಾರ್ಯ ನಡೆಸಲಾಗುತ್ತಿದ್ದು, ಹೆಚ್ಚುವರಿಯಾಗಿ 03 ಸಂಖ್ಯೆಯ ಬ್ಯಾಗೇಜ್ ಸ್ಕ್ಯಾನರ್ ಸಿಸ್ಟಂಗಳನ್ನು ಸರಬರಾಜು ಮಾಡಲು ಕಾರ್ಯದೇಶ ನೀಡಲಾಗಿದೆ.<br><br>➢ ಸರ್ಕಾರದ ಸುತ್ತೋಲೆ ಸಂಖ್ಯೆ: ಹೆಚ್‌ಡಿ 03 ಪಿಆರ್‌ಎ 2010 ದಿನಾಂಕ: 22.03.2010 ರನ್ವಯ ಕಾರಾಗೃಹಗಳಲ್ಲಿ ಅನಿರೀಕ್ಷಿತ ತಪಾಸಣೆ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಆದೇಶಿಸಲಾಗಿದೆ. ಅದರನ್ವಯ ಕಾರಾಗೃಹಗಳಲ್ಲಿ ಕಾಲಕಾಲಕ್ಕೆ ಅನಿರೀಕ್ಷಿತ ತಪಾಸಣೆ ಕೈಗೊಳ್ಳಲಾಗುತ್ತಿದೆ.<br><br>➢ ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 37 ಪಿಆರ್‌ಎ 2022, ದಿನಾಂಕ: 17.03.2022 ರನ್ವಯ ಸ್ಥಳೀಯ ಪೊಲೀಸ್ ಅಧಿಕಾರಿಗಳು, ಕಾರಾಗೃಹದ ಅಧಿಕಾರಿಗಳು, ಆಂತರಿಕ ಭದ್ರತಾ ವಿಭಾಗದ ಅಧಿಕಾರಿಗಳು, ಕೆ.ಎಸ್.ಐ.ಎಸ್.ಎಫ್ ಅಧಿಕಾರಿಗಳು (ಕೆ.ಎಸ್.ಐ.ಎಸ್.ಎಫ್ ನಿಯೋಜಿಸಿರುವ ಕಾರಾಗೃಹಗಳಲ್ಲಿ) ಸಮನ್ವಯ ಮತ್ತು Criminal Intelligence ಹಂಚಿಕೆ ಸಭೆಗಳನ್ನು ನಡೆಸಿ, ಕಾರಾಗೃಹಗಳಲ್ಲಿ ಮೊಬೈಲ್ ಫೋನ್‌ಗಳು ಮತ್ತು ಇತರೆ ಯಾವುದೇ ರೀತಿಯ ನಿಷೇಧಿತ ವಸ್ತುಗಳ ಕಳ್ಳ ಸಾಗಣಿಕೆಯನ್ನು ಹಾಗೂ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | ➢ ಬೆಂಗಳೂರು ಕೇಂದ್ರ ಕಾರಾಗೃಹದ ಭದ್ರತೆಗೆ ಸಂಬಂಧಿಸಿದಂತೆ ಆಂತರಿಕ ಭದ್ರತಾ ಇಲಾಖೆ ಹಾಗೂ ಸ್ಥಳೀಯ ಭದ್ರತಾ ವಿಭಾಗಗಳ ಸಂಯೋಗದೊಂದಿಗೆ ಜಂಟಿ ಭದ್ರತಾ ಪರಿಶೀಲನಾ (Joint Security Review-JSR) ಪತ್ರ ಸಂಖ್ಯೆ: SBS/SBN-2/SEC-08/2023 Dated: 10-10-2023 ರ ವರದಿಯನ್ವಯ ಕಾರಾಗೃಹದ ಭದ್ರತೆ ಕುರಿತು ಸೂಕ್ತ ಕ್ರಮ ವಹಿಸಲಾಗುತ್ತಿದೆ.<br><br>➢ ಕಾರಾಗೃಹಗಳಲ್ಲಿ ತಪಾಸಣೆ ಸಮಯದಲ್ಲಿ ನಿಷೇಧಿತ ವಸ್ತುಗಳು ಕಂಡುಬಂದಲ್ಲಿ ಅಂತಹ ವ್ಯಕ್ತಿಗಳ ವಿರುದ್ಧ Karnataka Prison Amendment Act-2022 (U/S-42) ರ ಪ್ರಕಾರ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ದಿನಾಂಕ: 05.04.2022 ರಿಂದ 03.03.2025 ರವರೆಗೆ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಮೊಬೈಲ್ ಹಾಗೂ ಗಾಂಜಾ ದೊರೆತಿರುವುದಕ್ಕೆ ಸಂಬಂಧಿಸಿದಂತೆ 69 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.<br><br>➢ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಮಾದಕ ವಸ್ತುಗಳನ್ನು (Narcotics) ಪತ್ತೆ ಹಚ್ಚಲು 02 ಸಂಖ್ಯೆ Belgian Malinois ತಳಿಯ ಶ್ವಾನಗಳನ್ನು ಖರೀದಿಸಿ ಅವುಗಳಿಗೆ ತರಬೇತಿ ನೀಡಿ ಶ್ವಾನದಳ ಸ್ಥಾಪಿಸಲಾಗಿರುತ್ತದೆ.<br><br>➢ ಅಧಿಕಾರಿ/ಸಿಬ್ಬಂದಿಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ಮೇಲಿಂದ ಮೇಲೆ ಅನಿರೀಕ್ಷಿತ ತಪಾಸಣೆ ಕೈಗೊಳ್ಳಲು ಕ್ರಮ ವಹಿಸಲಾಗಿರುತ್ತದೆ. ಪ್ರತಿನಿತ್ಯ ಬಂದಿಗಳನ್ನು ಹಾಗೂ ಬಂದಿಗಳ ಕೊಠಡಿಗಳನ್ನು ಅನಿರೀಕ್ಷಿತವಾಗಿ ತಪಾಸಣೆಗೆ ಒಳಪಡಿಸಲಾಗುತ್ತಿದೆ.<br><br>➢ ಬೆಂಗಳೂರು ಕೇಂದ್ರ ಕಾರಾಗೃಹವನ್ನು ವಿಚಾರಣಾ ಬಂದಿಗಳ ವಿಭಾಗ, ಸಜಾ ಬಂದಿಗಳ ವಿಭಾಗ ಮತ್ತು ಮಹಿಳಾ ಬಂದಿಗಳ ವಿಭಾಗ ಎಂದು 03 ವಿಭಾಗಗಳನ್ನಾಗಿ ಪ್ರತ್ಯೇಕಿಸಿ ಆದೇಶಿಸಲಾಗಿದೆ. ಪ್ರಸ್ತುತ ಕಾರಾಗೃಹಗಳನ್ನು ಪ್ರತ್ಯೇಕಿಸುವ ಮುಖ್ಯ ಗೋಡೆಯ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಶೀಘ್ರದಲ್ಲಿ ಕಾರಾಗೃಹಗಳನ್ನು ಪ್ರತ್ಯೇಕಿಸಿ ತಪಾಸಣೆ ಮತ್ತು ಭದ್ರತೆಗೆ ಅಗತ್ಯ ಕ್ರಮವಹಿಸಲಾಗುವುದು. |

| | | |
|---|---|---|
| | | ➢ ಕಾರಾಗೃಹದ ತಪಾಸಣಾ ಕರ್ತವ್ಯಕ್ಕೆ ಹಾಗೂ ನಿಷೇಧಿತ ವಸ್ತುಗಳು ಒಳನುಸುಳದಂತೆ ತಡೆಗಟ್ಟಲು ವಿಶೇಷ ತಪಾಸಣಾ ತಂಡ ರಚಿಸಿದ್ದು, ದಕ್ಷಿಣ ಮತ್ತು ಉತ್ತರ ವಲಯ ವ್ಯಾಪ್ತಿಯಲ್ಲಿ ಬರುವ ಕಾರಾಗೃಹಗಳಿಂದ ಮುಖ್ಯ ವೀಕ್ಷಕರು ಹಾಗೂ ವೀಕ್ಷಕ ಸಿಬ್ಬಂದಿಗಳು ಸೇರಿ ಒಟ್ಟು 25 ಸಿಬ್ಬಂದಿಗಳನ್ನು ಪ್ರತಿ ಮಾಹೆ ಸರದಿ ಪ್ರಕಾರ ವಿಶೇಷ ಕರ್ತವ್ಯಕ್ಕೆ ನೇಮಿಸಿ ತಪಾಸಣೆ ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 71 ಪಿಆರ್‌ಎ 2025

**(ಡಾ: ಜಿ. ಪರಮೇಶ್ವರ)**
ಗೃಹ ಸಚಿವರು